ಮೈಸೂರಿನಲ್ಲಿರುವ ಕ್ರೀಡಾಂಗಣ

೬೨೩. ಶ್ರೀಮತಿ ವಂಕ್ಕಾರ್ ಉನ್ನೀಸಾ (ನರಸಿಂಹರಾಜಪುರ).—ಮಾನ್ಯ ವಾರ್ತಾ, ಯುವ ಜನ ಸೇವಾ, ಕ್ರೀಡಾ ಹಾಗೂ ಪ್ರವಾಸೋದ್ಯಮ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸಿಂವರೆ ?

೧) ಮೈಸೂರಿನಲ್ಲಿ ನಿರ್ಮಾಣವಾಗುತ್ತಿರುವ ಕ್ರೀಡಾಂಗಣ ಯಾವಾಗ ಪೂರ್ಣಗೊಳ್ಳುತ್ತದೆ ?

೨) ಈವರೆಗೆ ಖರ್ಚಾಗಿರುವ ಹಣ ಹಾಗೂ ನಡೆದಿರುವ ಪ್ರಗತಿಯ ಬಗ್ಗೆ ?

೩) ದಸರಾ ಕ್ರೀಡೆಯನ್ನು ಇಲ್ಲಿ ನಡೆಸುವ ಸಾಧ್ಯತೆ ಇದೆಯೇ ?

ಶ್ರೀ ಜೀವರಾಜ ಆಳ್ವಾ (ವಾರ್ತಾ, ಪ್ರವಾಸೋದ್ಯಮ ಮಂತ್ರು ಯಂವಜನ ಸೇವಾ ರಾಜ್ಯ ಸಚಿವರು).—

೧) ಪೂರ್ಣಗೊಳ್ಳುವ ವಿಷಯಂ ಸಾರ್ವಜನಿಕ ವಂತಿಕೆಯ ಮೇಲೆ ಅವಲಂಭಿಸಿದೆ.

೨) ಇದುವರೆಗೆ ಖರ್ಚಾಗಿರುವ ಹಣ ೨೧,೦೮,೯೫೯–೦೦ ರೂಪಾಯಿಗಳು. ಆಟೋಟಗಳ ಮೈದಾನ, ಬಿ.ಎಸ್. ಹಾಸುಗಲ್ಲುಗಳು ಹಾಕುವ ಕೆಲಸ ಪೂರ್ಣಗೊಳ್ಳುವ ಹಂತದಲ್ಲಿದೆ. ವಾಲಿಬಾಲ್ ಹಾಗೂ ಬ್ಯಾಸ್ಕೆಟ್‌ಬಾಲ್ ಆಟದ ಮೈದಾನಗಳು ಪೂರ್ಣಗೊಂಡಿವೆ.

೩) ಅಕ್ಟೋಬರ್ ೧೯೮೬ರ ಒಳಗೆ ಕ್ರೀಡಾಂಗಣ ಪೂರ್ಣಗೊಂಡರೆ, ದಸರಾ ಕ್ರೀಡೆ ಇಲ್ಲಿ ಪಡೆಸಂವ ಸಾಧ್ಯತೆ ಇದೆ.

SMT. MUKTHARUNNISA.—I have not received the answer. Just now our Hon.Minister of State for Information and Youth Services has said that it is going to be ready bv next Dasara. I am happy for that. But it is pending for a long time and the Divisional Commissioner has formed a Committee and conducted "Rajkumar Nite" programme where about 25 lakh rupees were collected. The Government, it seems, will have to spend the same money. But still it is not finalised and if the present condition continues, I think, it may not be completed during your regime.

ಶ್ರೀ ಜೀವರಾಜ ಆಳ್ವ.—ಮಾನ್ಯ ಅಧ್ಯಕ್ಷರೇ, ಸುಮಾರು ೨೨ ಲಕ್ಷ ರೂಪಾಯಿ ಈ ಕ್ರೀಡಾಂಗಣದ ಮೇಲೆ ಖರ್ಚು ಆಗಿದ್ದು ಅದರಲ್ಲಿ ಸ್ವಲ್ಪ ಅವ್ಯವಹಾರ ಆಗಿರಬಹುದೆನ್ನುವ ಕಾರಣಕ್ಕೆ ನಾನು ಇದನ್ನು ವಿಜಿಲೆನ್ಸ್‌ಗೆ ಒಪ್ಪಿಸಿದೆ. ಇದು ಎನ್‌ಕ್ವೈರಿಯಲ್ಲಿರುವುದರಿಂದ ಲೋಕೋಪಯೋಗಿ ಇಲಾಖೆಯವರು ಪೂರ್ಣ ಕೆಲಸ ಮಾಡಬಾರದೂ ಎನ್ನುವ ಒತ್ತಡ ಇತ್ತು. ಆದುದರಿಂದ ಮುಂದೆ ಕೆಲಸ ಮಾಡಿಲ್ಲ. ಮಾನ್ಯ ಸದಸ್ಯರು ಹೇಳಿದ ಹಾಗೆ, ೩೦ ಲಕ್ಷ ರೂಪಾಯಿಯನ್ನು ಡಿವಿಜನಲ್ ಕಮಿಷನರ್ ಅವರೂ ಕಲೆಕ್ಟ್ ಮಾಡಿದ್ದಾರೆ. ಅದನ್ನು ಖರ್ಚು ಮಾಡುವುದಕ್ಕೆ ಕೆಲಸ ಪ್ರಾರಂಭವಾಗಿದೆ. ಲೋಕೋಪಯೋಗಿ ಇಲಾಖೆ ವತಿಯಿಂದ ಕೆಲಸ ಪ್ರಾರಂಭವಾಗಿದ್ದು ಅಕ್ಟೋಬರ್ ಒಳಗೆ ದಸರಾ ಕ್ರೀಡೆ ನಡೆಸುವುದಕ್ಕಿಂತ ಮುಂಚೆ ಅದನ್ನು ಮುಗಿಸುವ ಒಂದು ಆಸೆ ನನ್ನಲ್ಲಿ ಇದೆ.

SMT. MUKTHARUNNISA.—Thank you very much for your assurance You are an enthusiastic Minister and I hope you will take serious action and complete the stadium before Dasara. We are very proud to have a stadium praticularly at Mysore, where Dasara festival is being conducted.

ಶ್ರೀ ವೇದಾಂತ ಹೆಬ್ಬಿಗೆ.—ಈಗ ಏನು ಆಲ್ಲಿ ಸ್ಟೇಡಿಯಂ ಕಟ್ಟಲಾಗುತ್ತಿದೆ, ಆಲ್ಲಿ ಅರ್ಬನ್ ಲ್ಯಾಂಡ್ ಸೀಲಿಂಗ್‌ಗೆ ಎಕ್ಸೆಮ್ಪ್‌ಷನ್ ಸಿಕ್ಕಿಲ್ಲ ಹಾಗೂ ಜಯಚಾವುರಾಜೇಂದ್ರ ಒಡೆಯರ್

ಅವರ ತಂಗಿಯವರು ಸ್ಪೇಡಿಯಂ ಸೇರಿ ಅಲ್ಲಿನ ಜಾಗ ನಮಗೇ ಸಿಗಬೇಕೆಂದು ಹೇಳಿ ಹೈಕೋರ್ಟಿಗೆ ರಿಟ್ ಹಾಕಿದ್ದಾರೆ. ಇದರ ಬಗ್ಗೆ ಪರಿಸ್ಥಿತಿ ಏನಾಗಿದೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಜೀವರಾಜ ಆಳ್ವ.—ಇದರ ಬಗ್ಗೆ ನನಗೆ ವಿಚಾರ ತಿಳಿದಿಲ್ಲ. ಇದು ಮಾನ್ಯ ಸದಸ್ಯರಾದ ಹೆಮ್ಮಿಗೆಯವರಿಗೆ ಗೊತ್ತಿರಬಹುದು. ಈ ಬಗ್ಗೆ ಅವರು ಮಂತ್ರಿ ನಾವು ಚರ್ಚೆಮಾಡಿ ಒಂದು ತೀರ್ಮಾನ ತೆಗೆದುಕೊಳ್ಳುತ್ತೇವೆ.

ಚುಕ್ಕೆ ಪ್ರಶ್ನೆ ೧೨೨೯—ಸದಸ್ಯರು ಗೈರುಹಾಜರಿ.

ಚುಕ್ಕೆ ಪ್ರಶ್ನೆ ೩೫೫—ಸದಸ್ಯರು ಗೈರುಹಾಜರಿ.

ಹರಿಹರದಲ್ಲಿನ ದಾಮೋದರ ಪೈ ಆಸ್ಪತ್ರೆಯು ಕಟ್ಟಡವು ಬಿರುಕು ಬಿಟ್ಟಿರುವ ಬಗ್ಗೆ

೧೭೪೪. ಶ್ರೀ ಬಿ. ಜಿ. ಕೊಟ್ರಪ್ಪ (ಹರಿಹರ).—ಮಾನ್ಯ ಆರೋಗ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹರಿಹರದಲ್ಲಿರುವ ದಾಮೋದರ ಪೈ ಆಸ್ಪತ್ರೆಯು ಕಟ್ಟಡವು ಬಿರುಕು ಬಿಟ್ಟಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ರೋಗಿಗಳು ಮತ್ತು ವೈದ್ಯಾಧಿಕಾರಿಗಳು ಆ ಕಟ್ಟಡದಲ್ಲಿ ಇರಲು ಭಯ ಪಡುತ್ತಿರುವ ಸಂಗತಿ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಸದರಿ ಕಟ್ಟಡವನ್ನು ಸುಸ್ಥಿತಿಗೆ ತರಲು ಸರ್ಕಾರದವರು ಶೀಘ್ರ ಕ್ರಮ ಕೈಗೊಳ್ಳುವರೆ ?

ಈ) ಹಳೆಯ ಆಸ್ಪತ್ರೆ ಕಟ್ಟಡವನ್ನು ಉಪಯೋಗಿಸಿಕೊಂಡು ಹೊರ ರೋಗಿಗಳ ಬಗ್ಗೆ ಒಂದು ಕೌಂಟರ್ ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗುವುದೇ ?

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಮಾನ್ಯ ಆರೋಗ್ಯ ಸಚಿವರು).—

ಅ) ಹೌದು.

ಆ) ಹೌದು.

ಇ) ಹೌದು.

ಈ) ಸೂಕ್ತ ಕ್ರಮವನ್ನು ಆದಷ್ಟು ಬೇಗನೆ ತೆಗೆದುಕೊಳ್ಳಲಾಗುವುದು.

ಶ್ರೀ ಬಿ. ಜಿ. ಕೊಟ್ರಪ್ಪ.—ಅಧ್ಯಕ್ಷರೇ, ಹಳೆಯ ಆಸ್ಪತ್ರೆ ಕಟ್ಟಡವನ್ನು ಉಪಯೋಗಿಸಿಕೊಂಡು ಹೊರ ರೋಗಿಗಳಿಗಾಗಿ ಒಂದು ಕೌಂಟರ್ ಪ್ರಾರಂಭಿಸಬೇಕು ಹಾಗೂ ಹೊಸ ಕಟ್ಟಡದಲ್ಲಿ ದಾಮೋದರ ಪೈ ಆಸ್ಪತ್ರೆಯನ್ನು ವರ್ಗಾವಣೆ ಮಾಡಬೇಕೆಂದು ನಾನು ಹೇಳುತ್ತೇನೆ.

ಶ್ರೀ ಎಚ್. ಎಲ್. ತಿಮ್ಮೇಗೌಡ.—ಅಧ್ಯಕ್ಷರೇ, ಈಗಾಗಲೇ ಹಳೇ ಆಸ್ಪತ್ರೆಯಲ್ಲಿ ಔಟ್ ಪೇಷೆಂಟ್ ಕೌಂಟರ್ ನಡೆದುಕೊಂಡು ಬಂದಿದೆ. ಅಲ್ಲಿ ಕಟ್ಟಡದ ಸೀಲಿಂಗ್ ರಿಪೇರಿ ಮಾಡಿದರೆ ಸಾಕು ಎಂದು ಒಪೀನಿಯನ್ ಬಂತು. ಆಮೇಲೆ ಮತ್ತೆ ಕಟ್ಟಡವನ್ನು ಕೆಡವಬೇಕೆಂದು ಇನ್ನೊಂದು ಒಪೀನಿಯನ್ ಬಂತು. ಈ ಬಗ್ಗೆ ಲೋಕೋಪಯೋಗಿ ಇಲಾಖೆಯವರು ಏನು ಹೇಳುತ್ತಾರೋ ಅದನ್ನು ನೋಡಿ ಆದಷ್ಟು ಜಾಗ್ರತೆ ಹೊಸ ಕಟ್ಟಡದ ಬಗ್ಗೆ ಪ್ರಯತ್ನ ಮಾಡುತ್ತೇವೆ.

ಚುಕ್ಕೆ ಪ್ರಶ್ನೆ ೧೮೮೨—ಸದಸ್ಯರು ಗೈರುಹಾಜರಿ.

ಬಿಜಾಪುರ ಜಿಲ್ಲಾ ಆಸ್ಪತ್ರೆಯಲ್ಲಿನ ಸಿಬ್ಬಂದಿ

೧೮೮೩. ಶ್ರೀ ಬಾಬುರೆಡ್ಡಿ ವಿ. ತುಂಗಳ್ (ಬೀಳಗಿ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

೧ ಬಿಜಾಪುರ ಜಿಲ್ಲಾ ಆಸ್ಪತ್ರೆಯಲ್ಲಿರುವ ಸಿಬ್ಬಂದಿಯವರ ಸಂಖ್ಯೆ ಎಷ್ಟು ?

೨ ಎಷ್ಟು ಜನರಿಗೆ ಈಗ ವಸತಿ ಸೌಕರ್ಯ ಒದಗಿಸಲಾಗಿದೆ ?

೩ ವಸತಿ ಸೌಕರ್ಯವನ್ನು ಪಡೆಯದೆ ಇರುವವರಿಗೆ ವಸತಿ ಗೃಹಪನ್ನು ಕಟ್ಟಲು ತೆಗೆದುಕೊಂಡ ಕ್ರಮವೇನು ?